## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 201 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 06.07.2023 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ಸರ್ಕಾರವು ಮದ್ಯದ ಮೇಲೆ ನಿಗದಿಪಡಿಸಲಾದ ಅಬಕಾರಿ ತೆರಿಗೆ ಎಷ್ಟು; (ಸ್ಲ್ಯಾಬ್ ಮತ್ತು ಶೇಕಡವಾರು ವಿವರ ನೀಡುವುದು) | ಸರ್ಕಾರವು ಕಳೆದ 5 ವರ್ಷಗಳಲ್ಲಿ ಅಬಕಾರಿ ಇಲಾಖೆಗೆ ಮದ್ಯದ ಮೇಲೆ ನಿಗದಿಪಡಿಸಿರುವ ಅಬಕಾರಿ ಹೆಚ್ಚುವರಿ ಸುಂಕ, ಸ್ಲ್ಯಾಬ್ ಮತ್ತು ಶೇಕಡವಾರು ವಿವರಗಳನ್ನು ಅನುಬಂಧದಲ್ಲಿ ಇರಿಸಿದೆ. |
| ಆ) | ಕೋವಿಡ್ 2019ರ ಸಂದರ್ಭದಲ್ಲಿ ಎಷ್ಟು ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಸರ್ಕಾರವು ನಿಗದಿಪಡಿಸಿತ್ತು; ಇದರಿಂದ ಎಷ್ಟು ಮೊತ್ತ ಸರ್ಕಾರಕ್ಕೆ ಗಳಿಕೆಯಾಗಿರುತ್ತದೆ; | ಕೋವಿಡ್ 2019ರ ಸಂದರ್ಭದಲ್ಲಿ ಸರ್ಕಾರವು 2 ಬಾರಿ ಹೆಚ್ಚುವರಿ ಅಬಕಾರಿ ಸುಂಕವನ್ನು ನಿಗದಿಪಡಿಸಿರುತ್ತದೆ. 2020–21ನೇ ಸಾಲಿನ ಆಯವ್ಯಯದಲ್ಲಿ ಅಬಕಾರಿ ಇಲಾಖೆಗೆ ದಿನಾಂಕ:01.04.2020 ರಿಂದ ಜಾರಿಗೆ ಬರುವಂತೆ ಎಲ್ಲಾ 18 ಸ್ಲ್ಯಾಬ್ ಗಳ ಮೇಲೆ ಶೇ.6 ರಷ್ಟು ಹೆಚ್ಚುವರಿ ಅಬಕಾರಿ ಸುಂಕ ಹೆಚ್ಚಿಸಲಾಗಿದ್ದು, ಇದರಿಂದ 912 ಕೋಟಿ ರೂ.ಗಳಷ್ಟು ಹೆಚ್ಚುವರಿ ಅಬಕಾರಿ ಸುಂಕ ಸಂಗ್ರಹವಾಯಿತು.<br><br>ಮತ್ತೆ ದಿನಾಂಕ:07.05.2020 ರಿಂದ ಜಾರಿಗೆ ಬರುವಂತೆ ಸರ್ಕಾರವು ಮೊದಲ 4 ಸ್ಲ್ಯಾಬ್ ಗಳ ಮೇಲೆ ಶೇ.17, ಮುಂದಿನ 6 ಸ್ಲ್ಯಾಬ್‌ಗಳಲ್ಲಿ ಶೇ.21 ಮತ್ತು ಕೊನೆಯ 8 ಸ್ಲ್ಯಾಬ್ ಗಳ ಮೇಲೆ ಶೇ.25 ರಷ್ಟು ಹೆಚ್ಚುವರಿ ಅಬಕಾರಿ ಸುಂಕಗಳನ್ನು ಆಯವ್ಯಯದಲ್ಲಿ ಹೆಚ್ಚಿಸಲಾಯಿತು. ಇದರಿಂದ 2,726 ಕೋಟಿ ರೂ.ಗಳಷ್ಟು ಹೆಚ್ಚುವರಿ ಅಬಕಾರಿ ಸುಂಕ ಸಂಗ್ರಹವಾಗಿದ್ದು, ಒಟ್ಟಾರೆಯಾಗಿ |

3,638 ಕೋಟಿ ರೂ.ಗಳಷ್ಟು ಹೆಚ್ಚುವರಿ ಅಬಕಾರಿ ಸುಂಕ ಸಂಗ್ರಹವಾಗಿರುತ್ತದೆ.

ಇ) ಕಳೆದ 5 ವರ್ಷಗಳಲ್ಲಿ ಅಬಕಾರಿ ತೆರಿಗೆ ಸಂಗ್ರಹದ ಗುರಿಯೆಷ್ಟು; ಪ್ರಸ್ತುತ ಆ ಗುರಿಯನ್ನು ಮುಟ್ಟಲಾಗಿದೆಯೇ;

ಅಬಕಾರಿ ಇಲಾಖೆಗೆ ಕಳೆದ 05 ವರ್ಷಗಳಲ್ಲಿ ನಿಗಧಿಪಡಿಸಿದ ಅಬಕಾರಿ ತೆರಿಗೆಯ ಗುರಿ ಹಾಗೂ ಸಂಗ್ರಹವಾದ ಅಬಕಾರಿ ರಾಜಸ್ವದ ವಿವರಗಳು ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ ಸಂ. | ವರ್ಷ | ಆಯವ್ಯಯದಲ್ಲಿ ನಿಗದಿಪಡಿಸಿದ ಗುರಿ | ಸಂಗ್ರಹಿಸಲಾದ ಅಬಕಾರಿ ರಾಜಸ್ವ | ಆರ್ಥಿಕ ಗುರಿಗೆ ಶೇಕಡಾವಾರು ಸಾಧನೆ (%) |
|---|---|---|---|---|
| 1. | 2018–19 | 19750.00 | 19,943.93 | ಶೇ.100.98 |
| 2. | 2019–20 | 20,950.00 | 21,583.95 | ಶೇ.103.03 |
| 3. | 2020–21 | 22,700.00 | 23,332.10 | ಶೇ.102.78 |
| 4. | 2021–22 | 24,580.00 | 26,377.68 | ಶೇ.107.31 |
| 5. | 2022–23 | 29,000.00 (ಆಯವ್ಯಯ ಅಂದಾಜು) | 29,920.37 | ಶೇ.103.17 (ಆಯವ್ಯಯ ಅಂದಾಜು) |
| | | 32,000.00 (ಪರಿಷ್ಕೃತ ಗುರಿ) | | ಶೇ.93.50 (ಪರಿಷ್ಕೃತ ಗುರಿ) |

ಮೇಲಿನ ಅವಧಿಗಳಲ್ಲಿ ಸರ್ಕಾರವು ನಿಗಧಿಪಡಿಸಿದ ಅಬಕಾರಿ ತೆರಿಗೆ ಗುರಿಯನ್ನು ಪ್ರತಿ ವರ್ಷ ಗುರಿ ಮೀರಿ ಸಾಧಿಸಲಾಗುತ್ತಿದೆ. ಪ್ರಸಕ್ತ 2023–24ನೇ ಸಾಲಿಗೆ ಸರ್ಕಾರವು 35,000 ಕೋಟಿ ರೂ.ಗಳ ರಾಜಸ್ವ ಗುರಿಯನ್ನು ನಿಗದಿಪಡಿಸಿದ್ದು, ನಿಗಧಿಪಡಿಸಿದ ಗುರಿಯನ್ನು ಸಾಧಿಸಲು ಇಲಾಖೆಯು ಶ್ರಮವಹಿಸುತ್ತಿದೆ.

ಆಇ 31 ಇಎಲ್‌ಕ್ಯೂ 2023

(ಆರ್.ಬಿ.ತಿಮ್ಮಾಪುರ)
ಅಬಕಾರಿ ಸಚಿವರು

# ಅನುಬಂಧ

**ಅಬಕಾರಿ ಇಲಾಖೆಗೆ ಕಳೆದ 5 ವರ್ಷಗಳಲ್ಲಿ, ಸರ್ಕಾರವು ಭಾರತೀಯ ತಯಾರಿಕಾ ಮದ್ಯದ (IML) ಮೇಲೆ ನಿಗದಿಪಡಿಸಲಾದ ಅಬಕಾರಿ ಹೆಚ್ಚುವರಿ ಸುಂಕ (AED), ಸ್ಲ್ಯಾಬ್ ಮತ್ತು ಶೇಕಡವಾರು ವಿವರಗಳು**

| ಕ್ರ.ಸಂ. | ಘೋಷಿತ ಬೆಲೆ (ಪ್ರತಿ ರಟ್ಟಿನ ಪೆಟ್ಟಿಗೆ) | ಅಸ್ತಿತ್ವದ AED (ಪ್ರತಿ ಬಲ್ಕ್ ಲೀಟರ್) | 2018-19 | | | | 2019-20 | | 2020-21 | | | | 2021-22 | | 2022-23 | |
|---|---|---|---|---|---|---|---|---|---|---|---|---|---|---|---|---|
| | | | ಸ್ಲ್ಯಾಬ್ ನಂ.1 ನ್ನು ಹೊರತುಪಡಿಸಿ ಎಲ್ಲಾ 18 ಸ್ಲ್ಯಾಬ್‌ಗಳಲ್ಲಿ AED 8% ಹೆಚ್ಚಿಸಲಾಗಿದೆ. (w.e.f. 01-04-2018) | ಅಬಕಾರಿ ಹೆಚ್ಚುವರಿ ಸುಂಕ (AED) (ಬಲ್ಕ್ ಲೀಟರ್) | ಎಲ್ಲಾ 18 ಸ್ಲ್ಯಾಬ್‌ಗಳಲ್ಲಿ AED 4% ಹೆಚ್ಚು ಹೆಚ್ಚಿಸಲಾಗಿದೆ. (w.e.f. 01-08-2018) | ಅಬಕಾರಿ ಹೆಚ್ಚುವರಿ ಸುಂಕ (AED) (ಬಲ್ಕ್ ಲೀಟರ್) | AED ದರಗಳಲ್ಲಿ ಯಾವುದೇ ಬದಲಾವಣೆಗಳಿಲ್ಲ. | ಅಬಕಾರಿ ಹೆಚ್ಚುವರಿ ಸುಂಕ (AED) (ಬಲ್ಕ್ ಲೀಟರ್) | ಎಲ್ಲಾ 18 ಸ್ಲ್ಯಾಬ್‌ಗಳಲ್ಲಿ AED 6% ಹೆಚ್ಚಿಸಲಾಗಿದೆ (w.e.f 01-04-2020) | ಅಬಕಾರಿ ಹೆಚ್ಚುವರಿ ಸುಂಕ (AED) (ಬಲ್ಕ್ ಲೀಟರ್) | AED ಹೆಚ್ಚಳ ಮೊದಲ 4 ಸ್ಲ್ಯಾಬ್‌ಗಳಲ್ಲಿ 17%, ಮುಂದಿನ 6 ಸ್ಲ್ಯಾಬ್‌ಗಳಲ್ಲಿ 21% ಮತ್ತು ಕೊನೆಯ 8 ಸ್ಲ್ಯಾಬ್‌ಗಳಲ್ಲಿ 25% ಹೆಚ್ಚಿಸಲಾಗಿದೆ. (w.e.f. 07-05-2020) | ಅಬಕಾರಿ ಹೆಚ್ಚುವರಿ ಸುಂಕ (AED) (ಬಲ್ಕ್ ಲೀಟರ್) | AED ದರಗಳಲ್ಲಿ ಯಾವುದೇ ಬದಲಾವಣೆಗಳಿಲ್ಲ. | ಅಬಕಾರಿ ಹೆಚ್ಚುವರಿ ಸುಂಕ (AED) (ಬಲ್ಕ್ ಲೀಟರ್) | AED ದರಗಳಲ್ಲಿ ಯಾವುದೇ ಬದಲಾವಣೆಗಳಿಲ್ಲ. | ಅಬಕಾರಿ ಹೆಚ್ಚುವರಿ ಸುಂಕ (AED) (ಬಲ್ಕ್ ಲೀಟರ್) |
| 1 | 0 - 449 | 138 | 0 | 138 | | 144 | | 144 | | 153 | | 179 | | 179 | | 179 |
| 2 | 450 - 499 | 175 | | 189 | | 197 | | 197 | | 208 | | 245 | | 245 | | 245 |
| 3 | 500 - 549 | 231 | | 249 | | 259 | | 259 | | 275 | 17% | 322 | | 322 | | 322 |
| 4 | 550 - 599 | 297 | | 321 | | 334 | | 334 | | 354 | | 414 | | 414 | | 414 |
| 5 | 600 - 699 | 386 | | 417 | | 434 | | 434 | | 460 | | 557 | | 557 | | 557 |
| 6 | 700 - 799 | 472 | | 510 | | 530 | | 530 | | 562 | | 680 | | 680 | | 680 |
| 7 | 800 - 899 | 503 | | 543 | | 565 | | 565 | | 599 | | 725 | | 725 | | 725 |
| 8 | 900 - 999 | 543 | | 586 | | 609 | | 609 | | 646 | 21% | 782 | | 782 | | 782 |
| 9 | 1000 - 1099 | 568 | | 613 | | 638 | | 638 | | 676 | | 818 | | 818 | | 818 |
| 10 | 1100 - 1199 | 637 | 8% | 688 | 4% | 716 | 0% ಯಾವುದೇ ಬದಲಾವಣೆಗಳಿಲ್ಲ | 716 | 6% | 759 | | 918 | 0% ಯಾವುದೇ ಬದಲಾವಣೆಗಳಿಲ್ಲ | 918 | 0% ಯಾವುದೇ ಬದಲಾವಣೆಗಳಿಲ್ಲ | 918 |
| 11 | 1200 - 1299 | 742 | | 801 | | 833 | | 833 | | 883 | | 1104 | | 1104 | | 1104 |
| 12 | 1300 - 1399 | 863 | | 932 | | 969 | | 969 | | 1027 | | 1284 | | 1284 | | 1284 |
| 13 | 1400 - 1799 | 933 | | 1008 | | 1048 | | 1048 | | 1111 | | 1389 | | 1389 | | 1389 |
| 14 | 1800 - 2199 | 1042 | | 1125 | | 1170 | | 1170 | | 1240 | | 1650 | | 1550 | | 1550 |
| 15 | 2200 - 4924 | 1190 | | 1285 | | 1336 | | 1336 | | 1416 | 25% | 1770 | | 1770 | | 1770 |
| 16 | 4925 - 7650 | 1390 | | 1501 | | 1561 | | 1561 | | 1655 | | 2069 | | 2069 | | 2069 |
| 17 | 7651 - 15000 | 2000 | | 2160 | | 2246 | | 2246 | | 2381 | | 2976 | | 2976 | | 2976 |
| 18 | 15001 and above | 3000 | | 3240 | | 3370 | | 3370 | | 3572 | | 4465 | | 4465 | | 4465 |

ಭಾರತೀಯ ತಯಾರಿಕಾ ಮದ್ಯದ (IML) ಮೇಲಿನ ಅಬಕಾರಿ ಸುಂಕ (ED) ರೂ. 60/- ಪ್ರತಿ ಬಲ್ಕ್ ಲೀಟರ್

**ಅಬಕಾರಿ ಇಲಾಖೆಗೆ ಕಳೆದ 5 ವರ್ಷಗಳಲ್ಲಿ, ಸರ್ಕಾರವು ಬಿಯರ್ ಮೇಲೆ ನಿಗದಿಪಡಿಸಲಾದ ಅಬಕಾರಿ ಹೆಚ್ಚುವರಿ ಸುಂಕದ (AED) ವಿವರಗಳು**

| ಘೋಷಿತ ಬೆಲೆ (DP) ಬಿಯರ್ ಮೇಲಿನ ಅಬಕಾರಿ ಹೆಚ್ಚುವರಿ ಸುಂಕ (AED) 150% (ಪ್ರತಿ ಬಲ್ಕ್ ಲೀಟರ್) | 2018-19 | 2019-20 | 2020-21 | 2021-22 | 2022-23 |
|---|---|---|---|---|---|
| | AED ನಲ್ಲಿ ಯಾವುದೇ ಬದಲಾವಣೆಗಳಿಲ್ಲ. (DPಯಲ್ಲಿ 150%) | ಘೋಷಿತ ಬೆಲೆ (DP) ಬಿಯರ್ ಮೇಲಿನ ಅಬಕಾರಿ ಹೆಚ್ಚುವರಿ ಸುಂಕ (AED) 150% ರಿಂದ 175 % ಕ್ಕೆ ಏರಿಕೆ | AED ನಲ್ಲಿ ಯಾವುದೇ ಬದಲಾವಣೆಗಳಿಲ್ಲ. (DPಯಲ್ಲಿ 175%) | AED ನಲ್ಲಿ ಯಾವುದೇ ಬದಲಾವಣೆಗಳಿಲ್ಲ. (DPಯಲ್ಲಿ 175%) | AED ನಲ್ಲಿ ಯಾವುದೇ ಬದಲಾವಣೆಗಳಿಲ್ಲ. (DPಯಲ್ಲಿ 175%) |

ಬಿಯರ್ ಮೇಲಿನ ಅಬಕಾರಿ ಸುಂಕ (ED) ರೂ. 10/- ಪ್ರತಿ ಬಲ್ಕ್ ಲೀಟರ್

**ಆಇ 31 ಇಎಲ್‌ಕ್ಯೂ 2023**